# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 89/2020

P.W : 9
C.W: 25

**ದಿನಾಂಕ 13.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಅಬಿಲಾಷ್

**ತಂದೆಯ ಹೆಸರು** : ಲೇಟ್ ವೆಂಕಟಪ್ಪ

**ವಯಸ್ಸು** : 42 ವರ್ಷ

**ವೃತ್ತಿ** : ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ,
ಬೆಸ್ಕಾಂ , ನೆಲಮಂಗಲ

**ವಾಸಸ್ಥಳ** : ತುಮಕೂರು

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಭಿ ಸಲಾಯಿತು.** 1.

1. ನಾನು 2016 ರಿಂದ 2021 ರವರೆಗೆ ಕ್ಯಾತ್ಸಂದ್ರ ಬೆಸ್ಕಾಂ ಉಪ ವಿಭಾಗ 3 ಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ

ಕಾರ್ಯ ನಿರ್ವಹಿಸಿರುತ್ತೇನೆ. ಮಾರನಾಯಕನಹಳ್ಳಿ ಪಾಳ್ಯ ಕ್ಯಾತ್ಸಂದ್ರ ಬೆಸ್ಕಾಂ ಉಪ ವಿಭಾಗ 3 ರ ವ್ಯಾಪ್ತಿಗೆ ಬರುತ್ತದೆ.

2. ಕ್ಯಾತ್ಸಂದ್ರ ವೃತ್ತ ನಿರೀಕ್ಷಕರು ದಿ.29.01.2020 ರಂದು ಮಾರನಾಯಕನಪಾಳ್ಯದಲ್ಲಿ ರಾತ್ರಿ 10.15 ರಿಂದ 11.00 ಗಂಟೆಯವರೆಗೆ ಮಾರನಾಯಕನಪಾಳ್ಯದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಕೋರಿ ದೃಡೀಕರಣ ಪತ್ರವನ್ನು ಕೊಡುವಂತೆ ದಿ.15.03.2020 ರಲ್ಲಿ ಮನವಿ ಪತ್ರ ಸಲ್ಲಿಸಿದ್ದರು. ನಾನು ದಿ.04.04.2020 ರಂದು ಸದರ ಮನವಿ ಪತ್ರಕ್ಕೆ ದಿ.29.01.2020 ರಂದು ರಾತ್ರಿ 10.15 ರಿಂದ 11.00 ಗಂಟೆಯಲ್ಲ ಮಾರನಾಯಕನಪಾಳ್ಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಇಲ್ಲವೆಂದು ದೃಢೀಕರಣ ಪತ್ರ ನೀಡಿದ್ದೇನೆ. ಸಾಕ್ಷಿ ದೃಢೀಕರಣ ಪತ್ರ ಮತ್ತು ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.13 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತು ಮಾಡಲಾಯಿತು.

**ಪಾಟೀ ಸವಾಲು 1 ನೇ ಆರೋಪಿಗಳ ಪರ ಶ್ರೀ ಕೆ.ಹೆಚ್.ಜಿ. ವಕೀಲರಿಂದ**

3. ಮಾರನಾಯಕನಪಾಳ್ಯದ ಗ್ರಾಮಕ್ಕೆ ವಿದ್ಯುತ್ ಪೂರೈಕೆ ಇರುವ ಬಗ್ಗೆ ಹಿರೇಹಳ್ಳಿ ಕೆಪಿಟಿಸಿಎಲ್ ಎಂ.ಯುಎಸ್.ಎಸ್. ನಲ್ಲಿ ವಿದ್ಯುತ್ ಮೀಟರ್ ಅಳವಡಿಸಿದ್ದು ಆ ಬಗ್ಗೆ ಲಾಗ್ ಬುಕ್ ಸಹಾ ನಿರ್ವಹಿಸುತ್ತೇವೆ.

ನನ್ನ ದೃಢೀಕರಣ ಪತ್ರದೊಂದಿಗೆ ವಿದ್ಯುತ್ ಮೀಟರ್ ನಲ್ಲಿ ರಾತ್ರಿ 10.15 ರಿಂದ 11.00 ಗಂಟೆಯವರೆಗೆ ವಿದ್ಯುತ್ ಪೂರೈಕೆ ಇದ್ದ ಬಗ್ಗೆ ಮೀಟರ್ ರೀಡಿಂಗ್ ನಲ್ಲಿ ನನ್ನ ದೃಢೀಕರಣ ಪತ್ರದಲ್ಲಿ ನಮೂದು ಮಾಡಿಲ್ಲ. ಪೋಲೀಸ್ ಅಧಿಕಾರಿಗಳ ಕೋರಿಕೆಯ ಮೇರೆಗೆ ನಾನು ಸುಳ್ಳು ದೃಢೀಕರಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿ.29.01.2020 ರಂದು ರಾತ್ರಿ 10.15 ರಿಂದ 11.00 ಗಂಟೆ ಸಮಯದಲ್ಲಿ ಮಾರನಾಯಕನಪಾಳ್ಯಕ್ಕೆ ವಿದ್ಯುತ್ ಪೂರೈಕೆ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.